2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಭದ್ರಾವತಿ.

ದಿನಾಂಕಃ 22.08.2024 ರಂದು ಪಿ.ಡಬ್ಲ್ಯೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ವಿ.ವಿ ವಕೀಲರಿಂದಃ**

1. ನಮ್ಮ ಆಸ್ತಿಯ ಪಶ್ಚಿಮ ಭಾಗಕ್ಕೆ ಎದುರುದಾರರ ಆಸ್ತಿ ಬರುತ್ತದೆ. ಆಸ್ತಿ ನಮ್ಮದು ಎಂದು ತೋರಿಸಲು ದಾಖಲೆಯನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಜಾಗ ಅಸ್ತಿತ್ವದಲ್ಲಿ ಇಲ್ಲ ಎಂದು ನಗರ ಸಭೆಯವರು ಹಿಂಬರಹವನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಜಿಲ್ಲಾ ಅಧಿಕಾರಿಗಳ ಮುಂದೆ ಸಲ್ಲಿಸಿದ ಅರ್ಜಿ ಸಂಖ್ಯೆ ಸಿಸಿ 42/17-18 ವಜಾ ಆಗಿದೆ ಎಂದರೆ ಸರಿಯಲ್ಲ. ಖಾತೆ ಮಾಡಿಲ್ಲ ಅಧಿಕಾರಿಗಳ ವಿರುದ್ಧ ಮಾನ್ಯ ಲೋಕಯುಕ್ತರಿಗೆ ಅರ್ಜಿ ಕೊಟ್ಟಿರುತ್ತೇನೆ. ಸದರಿಯವರು ಸಹ ದಾಖಲೆಗಳು ಇಲ್ಲದ ಕಾರಣ ಖಾತೆ ಆಗಿಲ್ಲ ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ.

2. ಆಸ್ತಿ ಸಂಖ್ಯೆ 43/49, 50*50 ಅಡಿ ಜಾಗದಲ್ಲಿ 25*50 ಅಡಿ ಮಂಗಳೂರಿನ ಹಂಚಿನ ಮನೆಯ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿ 20*40 ಅಡಿ ಜಾಗದಲ್ಲಿ ಸ್ವಾಧೀನ ಇದ್ದಾರೆ. ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಸದರಿಯವರ ಆಸ್ತಿಯ ಬಗ್ಗೆ ನಗರ ಸಭೆಯವರು ಇ ಸ್ವತ್ತು ಕೊಟ್ಟಿದ್ದಾರೆ ಎಂದರೆ ಸರಿ. 1996-97 ನೇ ಸಾಲಿನಿಂದ ಸದರಿ

ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದು ಪಂಚಾಯತಿಯವರು ದಾಖಲೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ಜಾಗ ಅಸ್ತಿತ್ವ ದಲ್ಲಿ ಇಲ್ಲದ ಕಾರಣ ಎದುರುದಾರರ ವಿರುದ್ಧ ಪದೇ ಪದೇ ಸುಳ್ಳು ಪ್ರಕರಣಗಳನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಆಸ್ತಿಯ ಬಗ್ಗೆ ಸಿವಿಲ್ ದಾವೆಯನ್ನು ಈ ನ್ಯಾಯಾಲಯದಲ್ಲಿ ದಾಖಲಿಸಿದ್ದೇನೆ. ಅರ್ಜಿಯ 11 ನೇ ಕಂಡಿಕೆಯಲ್ಲಿ ಹೇಳಿರುವ ವಿಚಾರಗಳು ನಡೆದಿರುವುದಿಲ್ಲ ಎಂದುರುದಾರರಿಗೆ ತೊಂದರೆ ಕೊಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿಲ್ಲ ಎಂದರೆ ಸರಿಯಲ್ಲ.

**(ಮರು ವಿಚಾರಣೆ ಇರುವುದಿಲ್ಲ.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(Sd/-)

2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಭದ್ರಾವತಿ.